ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ
ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

ಉಪಸ್ಥಿತರುಃ- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ
ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,

ಸಿ.ಸಿ. ನಂಃ **324/2020**

ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪುರ
ಪೊಲೀಸ್ ಠಾಣೆ

// ವಿರುದ್ಧ //

ಆರೋಪಿ ಃ ಭೀಮು @ ಭೀಮಶಂಕರ.

## ದೋಷಾರೋಪಣೆ

| | |
|---|---|
| ಆರೋಪಿ **1.** | ಭೀಮು @ ಭೀಮಶಂಕರ ತಂದೆ ಸೌರಪ್ಪ ವಃ 26 ವರ್ಷ, ಉಃ ವ್ಯಾಪಾರ , ಸಾಃ ಯಲಸತ್ತಿ ತಾಃ ಗುರುಮಿಠಕಲ್ ಜಿಃ ಯಾದಗಿರಿ. |

## ಆಪಾದನೆಯ ಸಾರಾಂಶ

ದಿನಾಂಕ 26.03.2020 ರಂದು ಸೈದಾಪೂರ ಪೋಲಿಸ್ ಠಾಣೆ ಸರಹದ್ದಿಯಲ್ಲಿ ಬರುವ ಯಲಸತ್ತಿ ಗ್ರಾಮದ ಬಸನಿಲ್ದಾಣದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಚಾಸಾಃ1 ರವರಿಗೆ ಯಾರೋ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಅಂತಾ ಖಚಿತವಾದ ಬಾತ್ಮಿ ಬಂದ ಮೇರೆಗೆ ಚಾಸಾಃ1 ರವರು ತಮ್ಮ ಸಂಗಡ ಪಂಚ ಸಾಕ್ಷಿ ನಂ.2 ಮತ್ತು 3 ರವರು ಹಾಗೂ ಸಿಬ್ಬಂದಿ ಚಾಸಾಃ 4,5,6,7 ರವರನ್ನು ಕರೆದುಕೊಂಡು ಯಲಸತ್ತಿ ಗ್ರಾಮದ ಬಾತ್ಮಿ ಬಂದ ಸ್ಥಳಕ್ಕೆ 05-30 ಪಿ.ಎಮ್ ಕ್ಕೆ ಹೋದಾಗ ಆರೋಪಿತನು ಅಕ್ರಮವಾಗಿ ಮದ್ಯದ ಬಾಟಲಿಗಳನ್ನು ಮಾರುತ್ತಿದ್ದು 1)ರಟ್ಟಿನ ಬಾಕ್ಸನಲ್ಲಿ 650 ಎಮ್.ಎಲ್ ನ 04 ಕಿಂಗ್ ಪೀಶರ್ ಬಾಟಲುಗಳಿದ್ದು 2) ರಟ್ಟಿನಲ್ಲಿ 330 ಎಮ್. ಎಲ್ ನ 06 ಕಿಂಗಪೀಶರ ಬೀರ ಬಾಟಲಿಗಳಿದ್ದು ಅವುಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದು, ಈ ಮೂಲಕ ಆರೋಪಿತನಾದ ನೀನು ಭಾರತೀಯ ದಂಡ

ಸಂಹಿತೆ ಕಲಂ.32, 34 ಕೆ.ಇ ಆ್ಯಕ್ಟ್ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

ದಿನಾಂಕಃ **17.11.2023**
ಸ್ಥಳಃ ಯಾದಗಿರಿ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಯಾದಗಿರಿ.